ಡಾ. ಎಂ.ಎಸ್. ಚಿರಂಜೀವಿ ಅಂದರೆ ಸಾಕು, ಇಡೀ ವೈದ್ಯಲೋಕವೇ ಕಿವಿ ಅಗಲಿಸುತ್ತಿತ್ತು. ಮನೋವೈದ್ಯಕೀಯ ಕ್ಷೇತ್ರದಲ್ಲಂತೂ ಅವರ ಹೆಸರು ದಂತಕಥೆಯಾಗಿಹೋಗಿತ್ತು. ಸೈಕಾಲಜಿ ಅಂದರೆ ಚಿರಂಜೀವಿ, ಚಿರಂಜೀವಿ ಅಂದರೆ ಸೈಕಾಲಜಿ ಎಂದು ಜನ ಮಾತಾಡಿಕೊಳ್ಳುವುದನ್ನು ಅನೇಕ ಸಾರಿ ಅವರೇ ಕಿವಿಯಾರೆ ಕೇಳಿಸಿಕೊಂಡು ಉಬ್ಬಿಹೋಗುತ್ತಿದ್ದರು. ತಮ್ಮ ಜೀವನ ಮುಗಿದೇಹೋಯಿತು ಎಂದು ಆತ್ಮಹತ್ಯೆಗೆ ಪ್ರಯತ್ನಿಸಿದ್ದ ನೂರಾರು ಜನರನ್ನು ತಮ್ಮ ಸಮಾಲೋಚನೆಯಲ್ಲಿ ಜೀವನೋತ್ಸಾಹ ತುಂಬುವಂತೆ ಮಾಡುತ್ತಿದ್ದರು. ಇಳಿವಯಸ್ಸಲ್ಲೂ ಹುಡುಗಿಯರನ್ನು ಚುಡಾಯಿಸುತ್ತಿದ್ದರು. ಅವರು ರೇಗಿದರೆ, 'ಸಾಯಲು ಹೊರಟವಳಿಗೆ ಸಿಟ್ಯಾಕೆ ಬರಬೇಕು?' ಎಂದು ಮತ್ತೆ ಕಿಚಾಯಿಸುತ್ತಿದ್ದರು. 'ನಾವು ಸಂತೋಷವಾಗಿದ್ದರೆ ನಮ್ಮ ಜೀವನ ಎಂಬುದು ತುಂಬ ಶಾರ್ಟ್ ಅನಿಸುತ್ತದೆ. ಹಿಂಗೆ ಕಣ್ಮುಚ್ಚಿ ಹಂಗೆ ಬಿಡುವ ಹೊತ್ತಿಗೆ ಮುಗಿದೇ ಹೋಗಿರುತ್ತದೆ. ಅದೇ ಡಿಪ್ರೆಷನ್‌ಗೆ ಹೋದರೆ, ಈ ಲೈಫು ಎಂಬುದು ಘನಘೋರ ಅನಿಸಿಬಿಡುತ್ತದೆ. ಒಂದೊಂದು ನಿಮಿಷವೂ ಒಂದೊಂದು ಯುಗದಂತೆ ಭಾಸವಾಗುತ್ತದೆ. ಅಯ್ಯೋ, ಸತ್ತುಹೋಗಿಬಿಡಬೇಕು ಎಂದು ಆತ್ಮಹತ್ಯೆಗೆ ಪ್ರಯತ್ನಿಸುತ್ತೀರಾ. ಅದರ ಬದಲು ತಾನು ಸತ್ತುಹೋಗೇಬಿಟ್ಟಿದ್ದೀನಿ ಅಂತ ಬದುಕಿ ನೋಡಿ...

'ಈ ಜೀವನ ಅನ್ನುವುದು ಒಬ್ಬೊಬ್ಬರಿಗೆ ಒಂದೊಂದು ಸಲ ಮಾತ್ರ ಸಿಗುವಂಥದ್ದು. ಆದ್ದರಿಂದ ಅದನ್ನು ಎಷ್ಟು ಸಾಧ್ಯವೋ ಅಷ್ಟೂ ಅನುಭವಿಸಿಬಿಡಬೇಕು. ಈಗ ನನ್ನನ್ನೇ ನೋಡಿ, ನಿನ್ನಂಥ ಹುಡುಗಿ ಸಿಕ್ಕರೆ ಈಗಲೂ ಇನ್ನೊಮ್ಮೆ ಮದುವೆ ಆಗಿಬಿಡಬೇಕು ಅನ್ನಿಸುತ್ತಿದೆ. ಏನು ಮಾಡಲಿ, ನನ್ನ ದೇಹ ನನ್ನ ಮಾತು ಕೇಳುತ್ತಿಲ್ಲ. ಹಾಗಂಥ ನನ್ನ ಯೌವನವನ್ನೇನೂ ನಾನು ರಸಿಕತೆಯಿಲ್ಲದೆ ಕಳೆದಿಲ್ಲ. ಆದರೂ ಯಾಕೋ ಎಲ್ಲವನ್ನು ಅನುಭವಿಸಲು ಒಂದೇ ಜೀವನ ಸಾಲದು ಎಂದು ಅನ್ನಿಸುತ್ತಿರುತ್ತದೆ...' ಎನ್ನುತ್ತ ಸಾಯಬೇಕೆಂದುಕೊಂಡವರಲ್ಲೂ ಬದುಕಿನ ಉತ್ಸಾಹ ತುಂಬುತ್ತಿದ್ದರು.

ಡಾ. ಚಿರಂಜೀವಿ, ಸಿಮ್ಹಾನ್ಸ್ ಆಸ್ಪತ್ರೆ ಹುಟ್ಟಿದಾಗಿನಿಂದ ಹಿಡಿದು, ಮೂವತ್ತೈದು ವರ್ಷ ಅದರ ನಿರ್ದೇಶಕರಾಗಿ ಕೆಲಸ ಮಾಡಿದ್ದರು. ಆಮೇಲೂ ಕೂಡ ಸರ್ಕಾರ, ಅವರ ಅಂತರರಾಷ್ಟ್ರೀಯ ಮನ್ನಣೆ, ಪ್ರಾಮಾಣಿಕತೆಗಳನ್ನೆಲ್ಲ ಪರಿಗಣಿಸಿ ಮಹಾತ್ಮಗಾಂಧಿ ಆರೋಗ್ಯವಿಜ್ಞಾನ ವಿಶ್ವವಿದ್ಯಾಲಯಕ್ಕೆ ಮೂರು ವರ್ಷಗಳ ಅವಧಿಗೆ ಕುಲಪತಿಯಾಗಿ ನೇಮಿಸಿತು. ರೋಗಗ್ರಸ್ತವಾಗಿದ್ದ ಅದರ ಔನ್ನತ್ಯವನ್ನು ರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋದ ಮೇಲೆ ಮತ್ತೂ ಮೂರು

